# ಸಾಂವಿಧಾನಿಕ ಮೌಲ್ಯವಾಗಿ ಒಳಗೊಳ್ಳುವಿಕೆ: ವಿಶೇಷವಾಗಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ

**ಸತೀಶ್[1] & ವೀಣಾದೇವಿ[2]**

[1]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

[2]ಹಿರಿಯ ಆಯ್ಕೆ ಶ್ರೇಣಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**DOI: https://doi.org/10.5281/zenodo.18850626**

## ABSTRACT:

ಪ್ರಜಾಪ್ರಭುತ್ವದ ಯಶಸ್ಸು, ದೇಶದ ಸಮಸ್ತ ಪ್ರಜೆಗಳ ಒಳಗೊಳ್ಳುವಿಕೆಯನ್ನು ಆಧರಿಸಿರುತ್ತದೆ. ಭಾರತೀಯ ಸಮಾಜದ ಇತಿಹಾಸವನ್ನು ಅವಲೋಕಿಸಿದಾಗ ಕೆಲವೊಂದು ವರ್ಗಗಳು ಮಾತ್ರ ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಶಕ್ತವಾಗಿದ್ದು, ಆ ವರ್ಗಗಳು ಮಾತ್ರ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದನ್ನು ಕಾಣುತ್ತೇವೆ. ಇಂತಹ ಸೀಮಿತ ಒಳಗೊಳ್ಳುವಿಕೆಯಿಂದ ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸಲು ಸಾಧ್ಯವಿಲ್ಲ. ಈ ಲೇಖನವು ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಗುರಿಯನ್ನು ಹೊಂದಿದೆ. ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಪ್ರಜೆಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ಭಾರತದ ಪ್ರಜೆಗಳು ಅಧಿಕಾರ ಮೂಲ ಎಂಬ ವಿಷಯವನ್ನು, ಹಾಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮುಂತಾದ ಮೌಲ್ಯಗಳನ್ನು ಉಲ್ಲೇಖಿಸಲಾಗಿದೆ. ಸಂವಿಧಾನ ಜಾರಿಗೆ ಬಂದು 75 ವರ್ಷಗಳಾಗಿದ್ದರೂ ಸಹ ಪ್ರಜಾಪ್ರಭುತ್ವದಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಯು ನಮಗೆ ಸಂಪೂರ್ಣವಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಲೇಖನದಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ನಮ್ಮ ಸಂವಿಧಾನದಲ್ಲಿರುವ ಅಂಶಗಳನ್ನು, ಕಳೆದ 75 ವರ್ಷಗಳಲ್ಲಿ ಮಾಡಿರುವ ಸಂವಿಧಾನ ತಿದ್ದುಪಡಿಗಳನ್ನು ಹಾಗೂ ಸರ್ಕಾರ ಈ ವಿಷಯವಾಗಿ ಕೈಗೊಂಡ ಕ್ರಮಗಳ ಬಗ್ಗೆ, ಒಳಗೊಳ್ಳುವಿಕೆಯ ಮೇಲೆ ಈ ಎಲ್ಲಾ ಅಂಶಗಳ ಪ್ರಭಾವ, ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಒಳಗೊಳ್ಳುವಿಕೆಗೆ ಇರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಚರ್ಚೆ ಮಾಡಲಾಗಿದೆ.

## KEYWORDS:

ಪ್ರಜಾಪ್ರಭುತ್ವ, ಒಳಗೊಳ್ಳುವಿಕೆ, ಶೋಷಿತ ವರ್ಗಗಳು, ಸಂವಿಧಾನದ ಆಶಯಗಳು.

### ಪೀಠಿಕೆ:

ಪ್ರಜಾಪ್ರಭುತ್ವದ ಯಶಸ್ಸು ಸಂಪೂರ್ಣವಾಗಿ ಪ್ರಜೆಗಳ ಒಳಗೊಳ್ಳುವಿಕೆಯನ್ನು ಅವಲಂಬಿಸಿರುತ್ತದೆ. ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಭಾರತೀಯ ಸಮಾಜದ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ವರ್ಗಗಳು, ಮಹಿಳೆಯರು ಶೋಷಣೆಗೆ ಗುರಿಯಾಗಿದ್ದು ಹಾಗೂ ರಾಜ್ಯಾಡಳಿತದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಭಾರತದ ಸಂವಿಧಾನವು ತನ್ನಲ್ಲಿ ಅನೇಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ದೇಶದ ಸಮಸ್ತ ಪ್ರಜೆಗಳಿಗೆ ದೇಶದ ಆಡಳಿತದಲ್ಲಿ ಭಾಗವಹಿಸಲು ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ. ಮೌಲ್ಯಗಳು ಸರಿ ಮತ್ತು ತಪ್ಪುಗಳ ಬಗ್ಗೆ ವ್ಯಕ್ತಿ ಮತ್ತು ಸಮಾಜಕ್ಕೆ ಅಗತ್ಯ ಮಾರ್ಗದರ್ಶನ ನೀಡುತ್ತವೆ. ಇಂತಹ ಅನೇಕ ಮೌಲ್ಯಗಳನ್ನು

ಭಾರತ ಸಂವಿಧಾನದ ಪ್ರಸ್ತಾವನೆಯು ಸೇರಿದಂತೆ ಅನೇಕ ಭಾಗಗಳಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಅಲ್ಲದೇ ಈ ಮೌಲ್ಯಗಳು ಪ್ರಜೆಗಳನ್ನು ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆಗೆ ಇರುವ ಅಡೆತಡೆಗಳನ್ನು ನಿವಾರಿಸಿ ಅವರ ಭಾಗವಹಿಸುವಿಕೆಯ ಪ್ರಮಾಣವನ್ನು ಹೆಚ್ಚಿಸಿರುವುದು ಕಂಡುಬರುತ್ತದೆ.

**ಅರ್ಥ ಮತ್ತು ವ್ಯಾಖ್ಯಾನ:**

ಸಾಂವಿಧಾನಿಕ ಮೌಲ್ಯ: ಭಾರತ ಸಂವಿಧಾನವು ಸಮಸ್ತ ಭಾರತೀಯ ಪ್ರಜೆಗಳಿಗೆ ಪ್ರಜಾಪ್ರಭುತ್ವದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು ಅನೇಕ ಮೌಲ್ಯಯುತ ಅಂಶಗಳನ್ನು ಒಳಗೊಂಡಿದ್ದು, ಈ ಎಲ್ಲಾ ಅಂಶಗಳಿಗೆ ಸಾಂವಿಧಾನಿಕ ಮೌಲ್ಯಗಳೆಂದು ಕರೆಯಬಹುದು.

ಶೋಷಿತ ವರ್ಗಗಳು: ಭಾರತೀಯ ಸಮಾಜದಲ್ಲಿ ಅನೇಕ ಶತಮಾನಗಳಿಂದ ಜಾತಿ, ಮತ, ಲಿಂಗ ಮುಂತಾದ ಸಾಮಾಜಿಕ ಅಂಶಗಳ ಆಧಾರದ ಮೇಲೆ ಅಸಂಖ್ಯಾತ ಜನ ಶೋಷಣೆಗೆ ಒಳಗಾಗಿದ್ದು, ಅವರೆಲ್ಲರನ್ನು ಶೋಷಿತರು ಎಂದು ಪರಿಗಣಿಸಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಜನ ಹಾಗೂ ಎಲ್ಲಾ ವರ್ಗದ ಮಹಿಳೆಯರು ಅತಿ ಹೆಚ್ಚು ಶೋಷಣೆಗೆ ಒಳಗಾಗಿರುವುದು ಕಂಡುಬರುತ್ತದೆ.

ಒಳಗೊಳ್ಳುವಿಕೆ: ಯಾವುದೇ ಒಂದು ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆ ದೇಶದ ಎಲ್ಲಾ ಪ್ರಜೆಗಳು ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವುದು ಅತ್ಯಗತ್ಯವಾಗಿದೆ. ಒಳಗೊಳ್ಳುವಿಕೆಯನ್ನು ಭಾರತದ ದೃಷ್ಟಿಯಿಂದ ನೋಡಿದಾಗ ಹಲವಾರು ಸಾಮಾಜಿಕ ಅಂಶಗಳ ಆಧಾರದ ಮೇಲೆ ಶೋಷಿತ ವರ್ಗಗಳ ಒಳಗೊಳ್ಳುವಿಕೆಯನ್ನು ಇವತ್ತಿಗೂ ಸಹ ನಾವು ಪರಿಪೂರ್ಣವಾಗಿ ನೋಡಲು ಸಾಧ್ಯವಾಗುತ್ತಿಲ್ಲ. ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಈ ಎಲ್ಲಾ ಶೋಷಿತ ವರ್ಗಗಳ ಜನರು ಇತರೆ ಪ್ರಜೆಗಳೊಂದಿಗೆ ಸಮಾನವಾಗಿ ಪ್ರಜಾಪ್ರಭುತ್ವದ ಚಟುವಟಿಕೆಗಳಲ್ಲಿ ಒಳಗೊಳ್ಳುವುದು ಅತ್ಯಗತ್ಯವಾಗಿದೆ.

**ಅಧ್ಯಯನದ ಉದ್ದೇಶಗಳು:**

- 2009 ರಿಂದ 2024ರ ವರೆಗೆ ಕರ್ನಾಟಕದಲ್ಲಿ ನಡೆದ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಜನ ಹಾಗೂ ಎಲ್ಲಾ ವರ್ಗದ ಮಹಿಳೆಯರ ಒಳಗೊಳ್ಳುವಿಕೆಯನ್ನು ಅಧ್ಯಯನ ಮಾಡುವುದು.
- ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಅವಕಾಶ ಕಲ್ಪಿಸಿರುವ ಭಾರತ ಸಂವಿಧಾನದ ಮೌಲ್ಯಗಳ ಬಗ್ಗೆ ಅಧ್ಯಯನ ಮಾಡುವುದು.
- ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಇರುವ ಸವಾಲುಗಳ ಬಗ್ಗೆ ಅಧ್ಯಯನ ಮಾಡುವುದು.
- ಶೋಷಿತ ವರ್ಗಗಳ ಒಳಗೊಳ್ಳುವಿಕೆ ಹೆಚ್ಚಿಸಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಅಧ್ಯಯನ ಮಾಡುವುದು.

**ಮಾಹಿತಿ ವಿಧಾನ:** ಈ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನದಿಂದ ಪಡೆಯಲಾಗಿದೆ. ಸಂಬಂಧಿತ ಮಾಹಿತಿಯನ್ನು

ಗ್ರಂಥಗಳಿಂದ, ವರದಿಗಳಿಂದ, ಸಂಶೋಧನಾ ಬರಹಗಳಿಂದ ಹಾಗೂ ಅಂತರ್ಜಾಲದಿಂದ ಪಡೆಯಲಾಗಿದೆ.

2009 ರಿಂದ 2024ರ ವರೆಗಿನ ಕರ್ನಾಟಕದ ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಯ ಅಧ್ಯಯನ: 2001ರ ಜನಗಣತಿಯನ್ನು ಆಧರಿಸಿ ಸಂಸತ್ತು ಮತ್ತು ಭಾರತದ ಎಲ್ಲಾ ರಾಜ್ಯಗಳ (ಈ ಹಿಂದಿನ ಜಮ್ಮು ಮತ್ತು ಕಾಶ್ಮೀರ್ ರಾಜ್ಯವನ್ನು ಹೊರತು ಪಡಿಸಿ) ವಿಧಾನ ಸಭಾ ಕ್ಷೇತ್ರಗಳ ಮರುಹೊಂದಾಣಿಕೆ ಮಾಡುವ ಉದ್ದೇಶದಿಂದ ಭಾರತದ ಸಂಸತ್ತು ಕ್ಷೇತ್ರ ಮರುವಿಂಗಡಣಾ ಕಾಯಿದೆ– 2002 ಅನ್ನು ಅಂಗೀಕರಿಸಿತು. 2002ರ ನಾಲ್ಕನೇ ಪುನರ್ವಿಂಗಡಣಾ ಆಯೋಗವು ನ್ಯಾಯಮೂರ್ತಿ ಕುಲದೀಪ್ ಸಿಂಗ್‌ರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸಿ 2007ರಲ್ಲಿ ತನ್ನ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. ಭಾರತದ ರಾಷ್ಟ್ರಪತಿಗಳು ಈ ಆಯೋಗದ ಶಿಫಾರಸ್ಸುಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಸೂಚನೆಗೆ ಸಹಿಹಾಕುವ ಮೂಲಕ 2009ರ ಲೋಕಸಭಾ ಸಾರ್ವತ್ರಿಕ ಚುನಾವಣೆಯಿಂದ ಈ ಶಿಫಾರಸ್ಸುಗಳು ಜಾರಿಗೆ ಬಂದಿವೆ. ಇದರ ಪ್ರಕಾರ ಕರ್ನಾಟಕದಲ್ಲಿ ಬಿಜಾಪುರ, ಗುಲ್ಬರ್ಗಾ, ಚಿತ್ರದುರ್ಗ, ಚಾಮರಾಜನಗರ ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳು ಅನುಸೂಚಿತ ಜಾತಿಗೆ ಹಾಗೂ ರಾಯಚೂರು ಮತ್ತು ಬಳ್ಳಾರಿ ಲೋಕಸಭಾ ಕ್ಷೇತ್ರಗಳು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಡಲಾಗಿದೆ. ಈ ಮೀಸಲು ಕ್ಷೇತ್ರಗಳಲ್ಲಿ ಶೋಷಿತ ವರ್ಗದ ಜನರ ಒಳಗೊಳ್ಳುವಿಕೆಯನ್ನು ಈ ಕೆಳಗಿನಂತೆ ಕಾಣಬಹುದು.

2009 ರಿಂದ 2024ರ ವರೆಗೆ ನಡೆದ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಹಾಗೂ ಇತರೆ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಲಿಂಗವಾರು ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.


| ಕ್ರ. ಸಂ | ಕರ್ನಾಟಕದಲ್ಲಿ ನಡೆದ ಲೋಕಸಭಾ ಚುನಾವಣೆಗಳು | ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆ | | | ಇತರೆ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಮಹಿಳೆಯರು | ಪುರುಷರು | ಒಟ್ಟು | ಮಹಿಳೆಯರು | ಪುರುಷರು | ಒಟ್ಟು |
| 01 | 2009 | 05 | 77 | 82 | 19 | 408 | 427 |
| 02 | 2014 | 01 | 94 | 95 | 20 | 414 | 434 |
| 03 | 2019 | 01 | 74 | 75 | 26 | 452 | 478 |
| 04 | 2024 | 08 | 84 | 92 | 40 | 434 | 474 |

**Source–** www.eci.gov.in › statistical–reports

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಶೋಷಿತ ವರ್ಗಗಳೂ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಮಹಿಳೆಯರ ಪ್ರಮಾಣ ಬಹಳ ಕಡಿಮೆ ಇರುವುದು

ಕಂಡುಬರುತ್ತದೆ.

2009 ರಿಂದ 2024ರ ವರೆಗೆ ಕರ್ನಾಟಕದ 05 ಅನುಸೂಚಿತ ಜಾತಿ ಹಾಗೂ 02 ಅನುಸೂಚಿತ ಬುಡಕಟ್ಟು ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯ ಕ್ಷೇತ್ರವಾರು ಮಾಹಿತಿಯನ್ನು ಕೆಳಗಿನ ಗ್ರಾಫ್‌ನಲ್ಲಿ ಕಾಣಬಹುದು.




**Source–** www.eci.gov.in › statistical–reports

ಈ ಮೇಲಿನ ಗ್ರಾಫ್ ಅನ್ನು ಅವಲೋಕಿಸಿದಾಗ ಕೆಲವೊಂದು ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳ ಸ್ಪರ್ಧೆಯ ಪ್ರಮಾಣ ಮೇಲ್ಮುಖವಾಗಿರುವುದು ಕಂಡುಬರುತ್ತದೆ. ಬಹುತೇಕ ಕ್ಷೇತ್ರಗಳಲ್ಲಿ ಸ್ಪರ್ಧೆಯ ಪ್ರಮಾಣ ಏರಿಳಿತವಾಗಿರುವುದು ಸ್ಪಷ್ಟವಾಗಿದೆ. ಮೀಸಲು ಕ್ಷೇತ್ರಗಳಲ್ಲಿ ಚುನಾವಣಾ ಸ್ಪರ್ಧೆಯಲ್ಲಿ ಇಷ್ಟೊಂದು ಕಡಿಮೆ ಇರುವ ಶೋಷಿತ ವರ್ಗಗಳ ಒಳಗೊಳ್ಳುವಿಕೆಯ ಪ್ರಮಾಣವು, ಸಾಮಾನ್ಯ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚು ಚಿಂತಾಜನಕವಾಗಿರುವುದರಲ್ಲಿ ಸಂದೇಹವಿಲ್ಲ.

**ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ಸಾಂವಿಧಾನಿಕ ಮೌಲ್ಯಗಳು:**

ಭಾರತ ಸಂವಿಧಾನದ ಪ್ರಸ್ತಾವನೆಯು ಸಂವಿಧಾನದ ಕೈಗನ್ನಡಿಯಾಗಿದ್ದು, ಇದರಲ್ಲಿ ಉಲ್ಲೇಖವಾಗಿರುವ ಭಾರತದ ಪ್ರಜೆಗಳಾದ ನಾವು, ಪ್ರಜಾಪ್ರಭುತ್ವ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಇತ್ಯಾದಿ ಅಂಶಗಳು ಜನರ ಒಳಗೊಳ್ಳುವಿಕೆಗೆ ಬೇಕಾದ ಅವಕಾಶಗಳನ್ನು ಹಕ್ಕುಗಳ ಮೂಲಕ ಕಲ್ಪಿಸಿಕೊಟ್ಟಿರುವುದು ಕಂಡುಬರುತ್ತದೆ.

ಭಾರತ ಸಂವಿಧಾನದ ಪ್ರಸ್ತಾವನೆಯು 'ಭಾರತದ ಪ್ರಜೆಗಳಾದ ನಾವು' ಎಂಬ ವ್ಯಾಖ್ಯಾನದಿಂದ ಆರಂಭವಾಗುತ್ತದೆ, ಈ ವ್ಯಾಖ್ಯಾನವು ಸಂವಿಧಾನಕ್ಕೆ ಅಧಿಕಾರದ ಮೂಲ ದೇಶದ ಸಮಸ್ತ ಪ್ರಜೆಗಳು ಎಂಬುವುದನ್ನು ಸ್ಪಷ್ಟಪಡಿಸುತ್ತದೆ. ಅಂದರೆ ದೇಶದಲ್ಲಿರುವ ಪ್ರಜೆಗಳು ಜಾತಿ, ಮತ, ಧರ್ಮ, ಲಿಂಗ, ವರ್ಣಗಳೆಂಬ ತಾರತಮ್ಯವಿಲ್ಲದೆ ಎಲ್ಲರೂ ಅಧಿಕಾರದ ಮೂಲ ಎಂಬ ಅಂಶವನ್ನು ಸ್ಪಷ್ಟಪಡಿಸುವ ಮೂಲಕ ಪ್ರಜೆಗಳ ಒಳಗೊಳ್ಳುವಿಕೆಯ ಪ್ರತೀಕವಾಗಿರುವುದು ಕಂಡುಬರುತ್ತದೆ.

ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ ಎಂಬ ಅಂಶವನ್ನು ಪ್ರಸ್ತಾವನೆಯಲ್ಲಿ ಹೇಳಲಾಗಿದೆ, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿರುತ್ತಾರೆ, ಇಲ್ಲಿ ಜನರು ತಮಗೆ ಇಷ್ಟವಾದ ಸರ್ಕಾರವನ್ನು ಅಧಿಕಾರಕ್ಕೆ ತರುವ ಮತ್ತು ಬೇಡವಾದ ಸರ್ಕಾರವನ್ನು ಅಧಿಕಾರದಿಂದ ತೆಗೆದುಹಾಕುವ ಅಂತಿಮ ಅಧಿಕಾರವನ್ನು ಹೊಂದಿರುತ್ತಾರೆ ಇದಕ್ಕಾಗಿ ನಿಗದಿತ ಅವಧಿಯಲ್ಲಿ ಚುನಾವಣೆಗಳು ನಡೆಯುತ್ತವೆ, ಈ ಚುನಾವಣೆಗಳಲ್ಲಿ ಮತದಾರರು ತಮ್ಮ ಮತಾಧಿಕಾರದ ಮೂಲಕ ಸರ್ಕಾರವನ್ನು ಬದಲಾಯಿಸುವಲ್ಲಿ ಭಾಗವಹಿಸುವರು.

ದೇಶದಲ್ಲಿ 18 ವರ್ಷ ಪೂರ್ಣಗೊಳಿಸಿರುವ ಸಮಸ್ತ ಪ್ರಜೆಗಳಿಗೆ ಮತಾಧಿಕಾರವನ್ನು ನೀಡಿದ್ದು, ಮತಾಧಿಕಾರಕ್ಕೆ ವಯಸ್ಸನ್ನು ಹೊರತುಪಡಿಸಿ ಯಾವುದೇ ವಿಶೇಷ ಅರ್ಹತೆಯನ್ನು ಗೊತ್ತುಪಡಿಸಿಲ್ಲ ಇದು ರಾಜಕೀಯ ನ್ಯಾಯದ ಪ್ರತೀಕವಾಗಿದೆ.

ಭಾರತ ಸಂವಿಧಾನವು ಸಂಸದೀಯ ಮಾದರಿ ಸರ್ಕಾರಕ್ಕೆ ಅವಕಾಶ ಕಲ್ಪಿಸಿದ್ದು, ಈ ಸರ್ಕಾರದ ಬಹುಮುಖ್ಯವಾದ ಗುಣವೆಂದರೆ ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಯಾಗಿ ಕಾರ್ಯನಿರ್ವಹಿಸುವುದು. ಅಂದರೆ ಈ ಮಾದರಿ ಸರ್ಕಾರದಲ್ಲಿ ನೈಜ ಕಾರ್ಯಾಂಗವಾಗಿರುವ ಪ್ರಧಾನಿ ನೇತೃತ್ವದ ಮಂತ್ರಿಮಂಡಲ ಲೋಕಸಭೆಯ ವಿಶ್ವಾಸದಲ್ಲಿ ಕಾರ್ಯನಿರ್ವಹಿಸುವುದು ಹಾಗೂ ರಾಜ್ಯದಲ್ಲಿ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲವು ವಿಧಾನಸಭೆಗೆ ಹೊಣೆಯಾಗಿ ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ, ಒಂದು ವೇಳೆ ನೈಜ ಕಾರ್ಯಾಂಗವು ಜನತಾ ಸದನದ ವಿಶ್ವಾಸ ಕಳೆದುಕೊಂಡರೆ ಅಧಿಕಾರದಿಂದ ಕೆಳಗಿಳಿಯಬೇಕಾಗುತ್ತದೆ. ಕಾರ್ಯಾಂಗವು ಜನತಾ ಸದನಕ್ಕೆ ಹೊಣೆಯಾಗಿರುವುದು ಪ್ರಜೆಗಳ ಒಳಗೊಳ್ಳುವಿಕೆಯ ಪ್ರತೀಕವಾಗಿದೆ.

ಸಂವಿಧಾನದ 14ನೇ ವಿಧಿಯಲ್ಲಿನ ಕಾನೂನಿನ ಮುಂದೆ ಎಲ್ಲರೂ ಸರಿಸಮಾನರು ಹಾಗೂ ಸಮಾನ ರಕ್ಷಕರು ಎಂಬ ಅಂಶ, 15ನೇ ವಿಧಿಯಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ತಾರತಮ್ಯ ಮಾಡಬಾರದು ಎಂಬ ಅಂಶ ಹಾಗೂ 17ನೇ ವಿಧಿಯಲ್ಲಿನ ಅಸ್ಪೃಶ್ಯತೆಯ ನಿಷೇಧದ ಅಂಶವು ಸಾಮಾಜಿಕ ನ್ಯಾಯದ ಪ್ರತೀಕವಾಗಿದ್ದು ಈ ಎಲ್ಲಾ ಅಂಶಗಳು ಪ್ರಜೆಗಳಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡುವುದರೊಂದಿಗೆ ಪ್ರಜೆಗಳು ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆಗೆ ಇದ್ದ ಅಡೆತಡೆಗಳನ್ನು ನಿವಾರಿಸಿರುವುದು ಕಂಡುಬರುತ್ತದೆ.

16ನೇ ವಿಧಿಯು ಸಾರ್ವಜನಿಕ ಉದ್ಯೋಗದಲ್ಲಿ ಎಲ್ಲರಿಗೂ ಸಮಾನಾವಕಾಶ ಕಲ್ಪಿಸಿಕೊಡುವ ಮೂಲಕ ಆರ್ಥಿಕ ನ್ಯಾಯದ ಪ್ರತೀಕವಾಗಿದ್ದು, ಇದು ಪರೋಕ್ಷವಾಗಿ ಜನರ ಒಳಗೊಳ್ಳುವಿಕೆಯ ಮೇಲೆ ಮಹತ್ವದ ಪ್ರಭಾವ ಬೀರುವುದು ಕಂಡುಬರುತ್ತದೆ.

ಅಲ್ಲದೆ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಉಲ್ಲೇಖವಾಗಿರುವ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವು ಸಹ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸಿ ಜನರ ಪಾಲ್ಗೊಳ್ಳುವಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ.

330 ಹಾಗೂ 332ನೇ ವಿಧಿಗಳು ಅನುಕ್ರಮವಾಗಿ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರಿಗೆ ಮೀಸಲಾತಿ ನೀಡುವ ಮೂಲಕ ಶೋಷಿತ ಸಮುದಾಯದ ಜನರಿಗೆ ರಾಜಕೀಯ ನ್ಯಾಯದ ಜೊತೆಗೆ ಭಾರತದ ಪ್ರಜಾಪ್ರಭುತ್ವದಲ್ಲಿ ಅವರ ಒಳಗೊಳ್ಳುವಿಕೆಗೆ ಅವಕಾಶ ನೀಡಿದೆ.

73 ಮತ್ತು 74ನೇ ಸಂವಿಧಾನ ತಿದ್ದುಪಡಿ ಕಾಯಿದೆಗಳು ಸ್ಥಳೀಯ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳು ಹಾಗೂ


ಮಹಿಳೆಯರಿಗೆ ರಾಜಕೀಯ ಮೀಸಲಾತಿ ನೀಡುವ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸುವ ಕಾರ್ಯ ಮಾಡಿದವು.

ಭಾರತದ ಪ್ರಜಾಪ್ರಭುತ್ವದಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ಅನೇಕ ಮೌಲಿಕ ಅಂಶಗಳನ್ನು ಭಾರತದ ಸಂವಿಧಾನ ಮೂಲಭೂತ ಹಕ್ಕುಗಳು ಹಾಗೂ ರಾಜಕೀಯ ಹಕ್ಕುಗಳ ಮೂಲಕ ಕಲ್ಪಿಸಿಕೊಟ್ಟರೂ ಸಹ ಶೋಷಿತ ವರ್ಗಗಳ ಒಳಗೊಳ್ಳುವಿಕೆಯನ್ನು ನಾವು ಸಂಪೂರ್ಣವಾಗಿ ನೋಡಲು ಸಾಧ್ಯವಾಗುತ್ತಿಲ್ಲ. ಶೋಷಿತ ವರ್ಗಗಳ ಒಳಗೊಳ್ಳುವಿಕೆ ಎಂಬುವುದು ಮತದಾನ, ಚುನಾವಣೆ ಸ್ಪರ್ಧೆ, ಜನಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವುದು, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಪ್ರಧಾನಿಯಾಗಿ ಕಾರ್ಯನಿರ್ವಹಿಸುವುದು ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ಆದರೆ ಸ್ವತಂತ್ರ ಭಾರತದ ರಾಜಕೀಯ ಇತಿಹಾಸವನ್ನು ಅವಲೋಕಿಸಿ ನೋಡಿದಾಗ ಶೋಷಿತ ವರ್ಗಗಳ ಬಹುಸಂಖ್ಯಾತ ಜನರು ಕೇವಲ ಚುನಾವಣೆಯಲ್ಲಿ ಮತ ಚಲಾಯಿಸುವುದಕ್ಕೆ ಮಾತ್ರ ಸೀಮಿತವಾಗಿರುವುದು ಕಂಡು ಬರುತ್ತದೆ ಇದನ್ನು ಹೊರತು ಪಡಿಸಿದರೆ ಗ್ರಾಮ ಪಂಚಾಯತಿಯಿಂದ ಲೋಕಸಭಾ ಚುನಾವಣೆಗಳ ವರೆಗೂ ಅವರ ಸ್ಪರ್ಧೆ ಕೇವಲ ಮೀಸಲು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದೆ. ಅಂದರೆ ಇವತ್ತಿಗೂ ಸಹ ಶೋಷಿತ ವರ್ಗಗಳು ತಮ್ಮ ರಾಜಕೀಯ ನ್ಯಾಯಕ್ಕಾಗಿ ಮೀಸಲು ಕ್ಷೇತ್ರಗಳನ್ನೇ ಅವಲಂಬಿಸಬೇಕಾಗಿದೆ ಅಂದರೆ ಭಾರತದ ಪ್ರಜಾಪ್ರಭುತ್ವದಲ್ಲಿ ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಪೂರಕವಾದ ಸನ್ನಿವೇಶ ಇನ್ನೂ ಮೂಡಿರುವುದು ಕಂಡುಬರುವುದಿಲ್ಲ. ಅದರಲ್ಲೂ ಮೀಸಲು ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಿ ಜನಪ್ರತಿನಿಧಿಗಳಾಗಿ ಆಯ್ಕೆಯಾಗುತ್ತಿರುವ ಶೋಷಿತ ವರ್ಗಗಳ ಬಹುಸಂಖ್ಯಾತ ಜನ ರಾಜಕೀಯ ಕುಟುಂಬದ ಹಿನ್ನೆಲೆಯಿಂದ ಬರುತ್ತಿರುವುದು ಸಾಮಾನ್ಯ ಅಂದರೆ ಶೋಷಿತ ವರ್ಗಗಳಲ್ಲಿ ರಾಜಕೀಯ ಹಿನ್ನೆಲೆ ಇರದ ಹಾಗೂ ಆರ್ಥಿಕವಾಗಿ ದುರ್ಬಲರಾದ ಜನರಿಗೆ ಮೀಸಲು ಕ್ಷೇತ್ರಗಳಲ್ಲಿ ಮತದಾನವನ್ನು ಹೊರತುಪಡಿಸಿದರೆ, ಇತರೆ ಕಾರ್ಯಚಟುವಟಿಕೆಗಳಲ್ಲಿ ಒಳಗೊಳ್ಳುವಿಕೆಗೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತಿಲ್ಲ ಎನ್ನುವುದು ವಾಸ್ತವ.

**ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಇರುವ ಸವಾಲುಗಳು:**


1. ಅನಕ್ಷರತೆ: ಶೋಷಿತ ವರ್ಗಗಳು ಅಂದರೆ ಮಹಿಳೆಯರ, ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಸಾಕ್ಷರತೆಯ ಪ್ರಮಾಣವು ಕಡಿಮೆ ಇರುವುದರಿಂದ ಅವರು ತಮ್ಮ ರಾಜಕೀಯ ಒಳಗೊಳ್ಳುವಿಕೆಯ ಬಗ್ಗೆ ಹೆಚ್ಚು ಜಾಗೃತರಾಗಿರುವುದು ಕಂಡುಬರುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಶೋಷಿತ ವರ್ಗಗಳ ಸಾಕ್ಷರತೆಯ ಪ್ರಮಾಣವನ್ನು ಕೆಳಗಿನ ಗ್ರಾಫ್‌ಗಳಲ್ಲಿ ಕಾಣಬಹುದು.

ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶದ ಪುರುಷ ಹಾಗೂ ಮಹಿಳಾ ಸಾಕ್ಷರತೆಯ ಪ್ರಮಾಣ




**Source:** https://www.census2011.co.in

**ಕರ್ನಾಟಕದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಾಕ್ಷರತೆಯ ಪ್ರಮಾಣ**




**Source:** https://www.census2011.co.in

2. ಜಾಗೃತಿಯ ಕೊರತೆ: ಶೋಷಿತ ವರ್ಗಗಳ ಜನರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಬಗ್ಗೆ ಸಂವಿಧಾನ ಕಲ್ಪಿಸಿರುವ ಅವಕಾಶಗಳ ಬಗ್ಗೆ ಹೆಚ್ಚು ಅರಿವನ್ನು ಹೊಂದಿರುವುದು ಕಂಡುಬರುವುದಿಲ್ಲ, ಇತ್ತೀಚಿನ ವರ್ಷಗಳಲ್ಲಿ ಅವರಲ್ಲಿ

ಜಾಗೃತಿ ಮೂಡುತ್ತಿದ್ದರೂ ಸಹ ಅವರು ಚುನಾವಣೆಗೆ ಸ್ಪರ್ಧಿಸುವ ಸಂಖ್ಯೆ ತೀರಾ ಕಡಿಮೆ ಇರುವುದು ಕಂಡುಬರುತ್ತದೆ. ಮೀಸಲು ಕ್ಷೇತ್ರಗಳಲ್ಲಿ ಮಹಿಳೆಯರ ಸ್ಪರ್ಧೆಯ ಪ್ರಮಾಣ ಇಂದಿಗೂ ಎರಡಂಕಿ ತಲುಪದಿರುವುದು ಕಟುಸತ್ಯವಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 7 ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಒಟ್ಟು ಮಹಿಳೆಯರ ಸಂಖ್ಯೆ ಕೇವಲ 08 ಆಗಿದ್ದರೆ, ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿರುವ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಕೇವಲ 40 ಆಗಿದೆ. ಇದರಲ್ಲಿ ಮೀಸಲು ಕ್ಷೇತ್ರದಿಂದ ಯಾವೊಬ್ಬ ಮಹಿಳಾ ಅಭ್ಯರ್ಥಿಯು ಗೆಲುವನ್ನು ಸಾಧಿಸಲಿಲ್ಲ ಹಾಗೂ ಸಾಮಾನ್ಯ ಕ್ಷೇತ್ರದಿಂದ 03 ಮಹಿಳೆಯರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿರುವರು ಆದರೆ ಅವರೆಲ್ಲರೂ ರಾಜಕೀಯ ಹಿನ್ನೆಲೆಯ ಕುಟುಂಬದವರಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

3. ಶೋಚನೀಯ ಸಾಮಾಜಿಕ ಸ್ಥಿತಿ: ಶೋಷಿತ ವರ್ಗಗಳ ಜನರಿಗೂ ಸಹ ಇತರೆ ಎಲ್ಲರಂತೆ ಭಾರತ ಸಂವಿಧಾನ ಸಮಾನ ಸಾಮಾಜಿಕ ನ್ಯಾಯವನ್ನು ಹಕ್ಕುಗಳ ಮೂಲಕ ಕಲ್ಪಿಸಿಕೊಟ್ಟಿದ್ದರೂ ಸಹ ಅವರು ಜಾತಿ, ಲಿಂಗ ಮುಂತಾದ ಸಾಮಾಜಿಕ ಅಂಶಗಳ ಆಧಾರದ ಮೇಲೆ ಶೋಷಣೆಗೆ ಒಳಗಾಗಿರುವುದು ಕಂಡುಬರುತ್ತದೆ, ಇಂದಿಗೂ ಸಹ ಗ್ರಾಮೀಣ ಸಮಾಜದಲ್ಲಿ ಜಟಿಲ ಜಾತಿ ವ್ಯವಸ್ಥೆಯನ್ನು ಹಾಗೂ ಲಿಂಗದ ಆಧಾರದ ಮೇಲೆ ತಾರತಮ್ಯವನ್ನು ಕಾಣಬಹುದಾಗಿದೆ.

4. ಶೋಚನೀಯ ಆರ್ಥಿಕ ಸ್ಥಿತಿ: ಶೋಷಿತ ವರ್ಗಗಳ ಜನರು ಮತದಾನಕ್ಕೆ ಮಾತ್ರ ಸೀಮಿತವಾಗಿರಲು ಅವರ ದುರ್ಬಲ ಆರ್ಥಿಕ ಸ್ಥಿತಿಯೇ ಬಹುಮುಖ್ಯ ಕಾರಣವಾಗಿದೆ. ಮೀಸಲು ಕ್ಷೇತ್ರದಿಂದ ಜನಪ್ರತಿನಿಧಿಯಾಗಿ ಆಯ್ಕೆಯಾಗುತ್ತಿರುವ ಬಹುತೇಕ ನಾಯಕರು ಸಾಮಾಜಿಕವಾಗಿ ಶೋಷಣೆಗೆ ಒಳಗಾದ ವರ್ಗಕ್ಕೆ ಸೇರಿದವರಾಗಿದ್ದರೂ ಸಹ ಅವರ ಆರ್ಥಿಕ ಸ್ಥಿತಿ ಉತ್ತಮವಾಗಿರುವುದು ಕಂಡುಬರುತ್ತದೆ. 2002ರ ಡಾ. ನಂಜುಂಡಪ್ಪ ಸಮಿತಿಯ ವರದಿಯ ಪ್ರಕಾರ ಈ ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿನ ಬಹುತೇಕ ಪ್ರದೇಶವು ಹಿಂದುಳಿದ ಪ್ರದೇಶಕ್ಕೆ ಒಳಪಟ್ಟಿರುವುದಾಗಿದೆ. 2023–24ನೇ ಸಾಲಿನ ಕರ್ನಾಟಕದ ಜಿಲ್ಲಾವಾರು ತಲಾ ಆದಾಯವನ್ನು ಅವಲೋಕಿಸಿದಾಗ ರಾಜ್ಯದ ಮೀಸಲು ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಜಿಲ್ಲೆಗಳ ತಲಾ ಆದಾಯವು ರಾಜ್ಯದ ತಲಾ ಆದಾಯಕ್ಕಿಂತಲೂ ಕಡಿಮೆ ಇರುವುದು ಕಂಡುಬರುತ್ತದೆ. ಅದರಲ್ಲೂ ಕಲಬುರಗಿ ಜಿಲ್ಲೆ ರಾಜ್ಯದಲ್ಲಿ ಅತಿ ಕಡಿಮೆ ತಲಾ ಆದಾಯ ಹೊಂದಿರುವ ಜಿಲ್ಲೆಯಾಗಿದೆ.

5. ರಾಜಕೀಯ ಪಕ್ಷಗಳ ಅಧಿಕಾರದ ವ್ಯಾಮೋಹ: ಬಹುತೇಕ ರಾಜಕೀಯ ಪಕ್ಷಗಳು ಮೀಸಲು ಕ್ಷೇತ್ರದಲ್ಲಿ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಸಂದರ್ಭದಲ್ಲಿ ಗೆಲ್ಲುವ ಕುದುರೆಗಳಿಗೆ ಪ್ರಥಮ ಆದ್ಯತೆ ನೀಡುವುದು ಸಾಮಾನ್ಯ. ಈ ರೀತಿ ರಾಜಕೀಯ ಪಕ್ಷಗಳಿಂದ ಟಿಕೆಟ್ ಪಡೆಯುವ ಬಹುತೇಕ ಅಭ್ಯರ್ಥಿಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಬಲರಾಗಿರುತ್ತಾರೆ. ಅಧಿಕಾರ ವ್ಯಾಮೋಹದಿಂದಾಗಿ ಕೆಲವೊಮ್ಮೆ ರಾಜಕೀಯ ಪಕ್ಷಗಳು ಮೀಸಲು ಕ್ಷೇತ್ರಗಳಲ್ಲಿ ರಾಜಕೀಯ ಹಿನ್ನೆಲೆಯ ಅಭ್ಯರ್ಥಿಗಳು ತಮ್ಮ ಪಕ್ಷದಲ್ಲಿ ಲಭ್ಯವಾಗದೆ ಇರುವಾಗ ಗೆಲ್ಲುವ ಕುದುರೆಗಳನ್ನು ಬೇರೆ ಕ್ಷೇತ್ರಗಳಿಂದ ಆಯ್ಕೆ ಮಾಡಿಕೊಂಡು ಟಿಕೆಟ್ ನೀಡುವುದು ಸಾಮಾನ್ಯವಾಗಿದೆ.

6. ಎರಡನೇ ಹಂತಕ್ಕೆ ಏರದ ಸ್ಥಳೀಯ ಸಂಸ್ಥೆಗಳ ಮೀಸಲಾತಿ ಆಶಯ: 73 ಮತ್ತು 74ನೇ

ಸಂವಿಧಾನ ತಿದ್ದುಪಡಿ ಕಾಯಿದೆಗಳಿಂದ ಸ್ಥಳೀಯ ಸಂಸ್ಥೆಗಳಲ್ಲಿ ಶೋಷಿತ ವರ್ಗಗಳು ಹಾಗೂ ಮಹಿಳೆಯರು ಮೀಸಲಾತಿ ಪಡೆದುಕೊಂಡಿದ್ದರೂ, ಈ ಮೀಸಲಾತಿಯು ಶೋಷಿತ ವರ್ಗಗಳ ಜನರನ್ನು ಹಾಗೂ ಮಹಿಳೆಯರನ್ನು ಮುಂದಿನ ಹಂತದ ಚುನಾವಣೆಗೆ ಸ್ಪರ್ಧಿಸಲು ಶಕ್ತರನ್ನಾಗಿಸಿರುವುದು ಕಂಡುಬರುವುದಿಲ್ಲ.

7. ಪ್ರಬಲ ಜಾತಿಗಳ ಪ್ರಭಾವ: ಹೆಚ್ಚುತ್ತಿರುವ ಜಾತಿ ರಾಜಕೀಯದಿಂದಾಗಿ ಪ್ರಬಲ ಜಾತಿಗಳು ಚುನಾವಣೆಯಲ್ಲಿ ಟಿಕೆಟ್ ಪಡೆಯಲು, ಚುನಾವಣೆಯಲ್ಲಿ ಗೆಲುವನ್ನು ಸಾಧಿಸಲು, ಮಂತ್ರಿ ಮಂಡಲದಲ್ಲಿ ಸ್ಥಾನ ಪಡೆಯಲು ಹಾಗೂ ಪ್ರಮುಖ ಖಾತೆ ಪಡೆಯಲು ನಿರ್ಣಾಯಕ ಪಾತ್ರವಹಿಸುತ್ತಿವೆ. ಈ ರೀತಿ ಪ್ರಬಲ ಜಾತಿಗಳ ಪ್ರಾಬಲ್ಯದಿಂದಾಗಿ ಶೋಷಿತ ವರ್ಗಗಳು ಭಾರತದ ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆಗೆ ಪ್ರಮುಖ ಸವಾಲಾಗಿದೆ.

**ಶೋಷಿತ ವರ್ಗಗಳ ಒಳಗೊಳ್ಳುವಿಕೆ ಹೆಚ್ಚಿಸಲು ಪರಿಹಾರೋಪಾಯಗಳು:**

- 106ನೇ ಸಂವಿಧಾನ ತಿದ್ದುಪಡಿ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
- ಮೀಸಲು ಲೋಕಸಭಾ ಕ್ಷೇತ್ರಗಳನ್ನು ದೀರ್ಘಕಾಲದವರೆಗೆ ಮುಂದುವರೆಸುವ ಬದಲಾಗಿ 2 ರಿಂದ 3 ಅವಧಿಗೆ ಸೀಮಿತಗೊಳಿಸಿ, ರಾಜಕೀಯ ಮೀಸಲಾತಿಯನ್ನು ಇತರೆ ಕ್ಷೇತ್ರಗಳಿಗೆ ವರ್ಗಾಯಿಸುವುದು ಸೂಕ್ತ.
- ಶೋಷಿತ ವರ್ಗಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದ ಸಂವಿಧಾನದ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಶೋಷಿತ ವರ್ಗಗಳ ಆರ್ಥಿಕ ಸ್ಥಿತಿ ಉತ್ತಮಪಡಿಸುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
- ರಾಜಕೀಯದಲ್ಲಿ ನಿವೃತ್ತಿ ವಯಸ್ಸನ್ನು ಹಾಗೂ ಕೆನೆಪದರ ನೀತಿಯನ್ನು ಗೊತ್ತುಪಡಿಸುವುದು.
- ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡುವುದು.
- ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಸರ್ಕಾರವೇ ಭರಿಸುವುದು.
- 73 ಮತ್ತು 74ನೇ ಸಂವಿಧಾನ ತಿದ್ದುಪಡಿ ಕಾಯಿದೆಗಳನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರುವುದು.

**ಉಪಸಂಹಾರ:**

ಅಧಿಕಾರದ ಮೂಲವಾಗಿರುವ ದೇಶದ ಸಮಸ್ತ ಪ್ರಜೆಗಳೆಲ್ಲರೂ ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆಯ ಮೂಲಕ ದೇಶದ ಪ್ರಜಾಪ್ರಭುತ್ವವನ್ನು ಭದ್ರಗೊಳಿಸಬೇಕೆಂಬುವುದು ನಮ್ಮ ಸಂವಿಧಾನದ ಆಶಯವಾಗಿದ್ದು, ಈ ಗುರಿ ಸಾಧನೆಗಾಗಿ ಸಂವಿಧಾನದ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಪ್ರಯತ್ನ ಮಾಡಬೇಕಾಗಿದೆ ಆಗ ಮಾತ್ರ ಅಧಿಕಾರದ ಮೂಲವಾಗಿರುವ ಭಾರತದ ಸಮಸ್ತ ಜನತೆ ಭಾರತದ ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆ ಹೊಂದಲು ಸಾಧ್ಯವಾಗುತ್ತದೆ ಹಾಗೂ ಭಾರತದ ಸಂವಿಧಾನದ ನೈಜ ಆಶಯಗಳು ಸಾಕಾರಗೊಳ್ಳಲು ಸಾಧ್ಯವಾಗುತ್ತದೆ.

## ಪರಾಮರ್ಶನ ಗ್ರಂಥಗಳು:


1. Jensenius R Francesca (2017), Social Justice through Inclusion, Oxford University Press
2. Weiner, M. (2001). The struggle for equality: Caste in Indian politics. In A. Kohli (Ed.), The Success of India's Democracy. Cambridge: Cambridge University Press.
3. Quraishi S Y, (2023), India's Experiment with Democracy, Harper Collins Publishers, Gurugram.
4. ಬಸು ದುರ್ಗಾ ದಾಸ್ (2013), ಭಾರತದ ಸಂವಿಧಾನ ಪರಿಚಯ, Lexis Nexis
5. ನ್ಯಾ. ನಾಗಮೋಹನದಾಸ್ ಎಚ್.ಎಸ್ (2022), ಮೀಸಲಾತಿ ಭ್ರಮೆ ಮತ್ತು ವಾಸ್ತವ, ಜಲ ಪ್ರಕಾಶನ ಬೆಂಗಳೂರು
6. ಸದಾನಂದ ಜೆ. ಎಸ್ (2018), ಭಾರತದ ಸಂಸತ್ತು, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
7. Akther Fatima (2023), Political Participation Has Strengthened The Spirit Of Inclusiveness In Indian Democracy, Multidisciplinary Output Research For Actual and International Issues Morfal Journal, E–ISSN: 2808–6635.
8. Pandey Shashikant and Mukherji Siddhartha (July–September, 2013), Indian Democracy: Inclusive in theory Exclusionary in Practice, The Indian Journal of Political Science, Vol.LXXIV, No.3
9. www.csds.in
10. http://www.eci.gov.in
11. https://www.census2011.co.in



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.